ಭವಿಷ್ಯದತ್ತ ಅವರ ಕಣ್ಣು. ನಾವು ಪ್ರೋತ್ಸಾಹಿಸಬೇಕು ಶಾಂತಾ'' ಎಂದೆ. ಅವಳಿಗೇನೋ ನಾನು ಸಮಾಧಾನ ಮಾಡಿದೆ. ನನಗೆ ಸಮಾಧಾನ ಮಾಡುವವರು ಯಾರು? ನರಸಿಂಹನಿಗೆ ಮನದಲ್ಲೇ ಕೈ ಮುಗಿದು ಊರಿಗೆ ಬಸ್ಸು ಹತ್ತಿದೆ.

ಆಗೆಲ್ಲ ಫೋನಿನ ವ್ಯವಸ್ಥೆ ಇಲ್ಲ. ದಿನ ಬಿಟ್ಟು ದಿನ ಒಂದು ಕಾರ್ಡನ್ನು ಮಗ ನಮಗೆ ಬರೆಯಬೇಕು, ಅದು ಮುಟ್ಟಿದ ಕೂಡಲೇ ನಾವೂ ಒಂದು ಕಾರ್ಡು ಬರೆದುಹಾಕಬೇಕು – ಇದು ಮಗನೊಡನೆ ಮಾಡಿಕೊಂಡ ಒಪ್ಪಂದ. ಹಾಗಾಗಿ, ಮಗ ದೂರವಿದ್ದರೂ ಪತ್ರದ ಮೂಲಕ ಅವನ ಯೋಗ ಕ್ಷೇಮ ತಿಳಿದು ಸಮಾಧಾನ ಪಡುವುದು. ದೊಡ್ಡ ರಜೆಗಳನ್ನು ಬಿಟ್ಟರೆ ಊರಿಗೆ ಬರುವುದೂ ಕಷ್ಟ. ಎಲ್ಲವನ್ನೂ ಲೆಕ್ಕ ಹಾಕಿ ಖರ್ಚು ಮಾಡಿ ಬದುಕು ನಡೆಸಿದವರು ನಾವು. ಮೊದಲ ವರ್ಷದ ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಪಡೆದು ಪಾಸಾದಾಗ ಪಾಯಸ ಮಾಡಿ ಕುಲದೇವರಿಗೆ ನೈವೇದ್ಯ ಮಾಡಿ ಒಂದು ಹಬ್ಬ ಮಾಡಿದೆವು. ಮಗ ಈಗ ದೇವರನ್ನು ಅಷ್ಟಾಗಿ ನಂಬಿದವನಲ್ಲ. ಆಧುನಿಕ ಕಾಲದ ವಿಚಾರಗಳು ಅವನಲ್ಲಿ ಪ್ರಶ್ನಿಸುವ ಮನೋಭಾವ ಬೆಳೆಸಿದ್ದವು. ಅದೇನೂ ನನಗೆ ಆಶ್ಚರ್ಯದ ಸಂಗತಿ ಅನ್ನಿಸಲಿಲ್ಲ. ತಾರುಣ್ಯದಲ್ಲಿ ಇಂಥ ಪರಿವರ್ತನೆಗಳು ಸಹಜ ಅಂದುಕೊಂಡೆ. ತಂದೆ ತಾಯಿಯರ ಕುರಿತು ಪ್ರೀತಿ, ವಾತ್ಸಲ್ಯದಲ್ಲಿ ಯಾವ ವ್ಯತ್ಯಾಸವೂ ಕಾಣಲಿಲ್ಲ. ಕಾಣದ ದೇವರ ಕುರಿತು ಸಂದೇಹವಾದಿಯಾಗುತ್ತಿದ್ದ.

ಎರಡನೇ ವರ್ಷದ ತರಗತಿಗಳು ಆರಂಭವಾಗಿ ಒಂದೆರಡು ತಿಂಗಳುಗಳಾಗಿರಬಹುದು. ಒಂದೆರಡು ಪತ್ರಗಳಲ್ಲಿ ಸ್ವಲ್ಪ ಹುಷಾರಿಲ್ಲವೆಂದು ಬರೆದ. ಅದರಿಂದಾಗಿ ರೂಮಿನಲ್ಲಿದ್ದು ವಿಶ್ರಾಂತಿ ಪಡೆದು ಸುಧಾರಿಸಿಕೊಳ್ಳುತ್ತಿದ್ದೇನೆ ಅಂತಲೂ ಬರೆದಿದ್ದ. ಮಾಮೂಲಿ ಥಂಡಿ ಜ್ವರ ಅಂದುಕೊಂಡೆವು. ಆದರೆ, ಜ್ವರ ಏರುತ್ತಲೇ ಹೋಯಿತು. ಪ್ರಹ್ಲಾದನ ಗೆಳೆಯನೊಬ್ಬ ಟೆಲಿಗ್ರಾಂ ಕಳುಹಿಸಿದ. ತಕ್ಷಣ ಮೈಸೂರಿಗೆ ಧಾವಿಸಿದೆ. ಡಾಕ್ಟರು, ''ಬೇರೇನೋ ಸಮಸ್ಯೆ ಇರಬಹುದು. ಪರೀಕ್ಷೆಗಳನ್ನು ಮಾಡಬೇಕು. ಆಸ್ಪತ್ರೆಗೆ ಸೇರಿಸಿ'' ಎಂದರು. ನನಗೆ 'ಮೈಸೂರಿನಲ್ಲಿ ಖರ್ಚು ಜಾಸ್ತಿ ಆದೀತು, ಹಾಸನಕ್ಕೆ ಹೋದರೆ ನಾವು ಬಲ್ಲ ಡಾಕ್ಟರಿದ್ದಾರೆ. ಅಲ್ಲಿಗೇ ಹೋಗುವುದು ಒಳಿತು' ಎಂದು ತೋರಿತು. ''ಹೇಗಾದರೂ ಮಾಡಿ ಊರಿಗೆ ಹೋಗಿ ಮುಟ್ಟುವಷ್ಟರ ಮಟ್ಟಿಗೆ ಹುಡುಗನಿಗೆ ಚೇತರಿಕೆ ಮಾಡಿಕೊಡಿ. ಅಲ್ಲಿ ಹೋದರೆ ನಮಗೆ ಅನುಕೂಲ. ನಮಗಿಲ್ಲಿ ಅನುಕೂಲ ಇಲ್ಲ'' ಎಂದು ಡಾಕ್ಟರಿಗೆ ಬಿನ್ನೈಸಿದೆ. ''ಆಯಿತು, ಈ ಔಷಧ ತೆಗೆದುಕೊಳ್ಳುತ್ತಿರಲಿ, ಬೇಗ ಹೊರಡಿ'' ಎಂದು ಕೆಲವು ಗುಳಿಗೆ, ಔಷಧ ಬರೆದುಕೊಟ್ಟರು. ಅವನ್ನೆಲ್ಲ ತೆಗೆದುಕೊಂಡು ಸೀದಾ ಊರಿನ ಬಸ್ಸು ಹತ್ತಿದೆವು. ವಾಹನ ಮಾಡಿಕೊಂಡು ಹೋಗಬೇಕಾದ ಸಂದರ್ಭ. ನನಗಷ್ಟು ಅನುಕೂಲ ಇಲ್ಲವಲ್ಲ!

ಊರಿಗೆ ಬಂದು ಒಂದು ರಾತ್ರಿ ಹೇಗೆ ಹೇಗೋ ಕಳೆದೆವು. ಇವನಿಗೆ ಜ್ವರ ಏರುತ್ತಿತ್ತು, ಇಳಿಯುತ್ತಿತ್ತು. ತಣ್ಣೀರುಪಟ್ಟಿ ಹಾಕುತ್ತಾ ಬೆಳಗು ಮಾಡಿದೆವು. ಹಾಸನಕ್ಕೆ ಹೋಗಿ ಪರಿಚಯದ ಡಾಕ್ಟರಿಗೆ ಪರಿಸ್ಥಿತಿ ತಿಳಿಸಿದೆ. ನನ್ನ ಮುಖ ನೋಡಿ ಏನನಿಸಿತೋ ಏನೋ, ಅವರ ಕಾರಲ್ಲೇ ನಮ್ಮ ಹಳ್ಳಿಗೆ ಬಂದರು. ಹುಡುಗನ ಪರಿಸ್ಥಿತಿ ಗಂಭೀರವಾಗಿದೆ ಎಂದರು. ''ರಕ್ತಪರೀಕ್ಷೆ ಆಗಬೇಕಲ್ಲ ಶಾಸ್ತ್ರಿಗಳೇ'' ಎಂದರು. ಅದಕ್ಕೆ ಹುಡುಗನನ್ನು ಹಾಸನಕ್ಕೇ ಕರೆದುಕೊಂಡು ಹೋಗಬೇಕು. ''ನನ್ನ ಕಾರಲ್ಲೇ ಬನ್ನಿ, ವಾಪಸು ಬರಲು ಮಾತ್ರ ಬೇರೆ ವ್ಯವಸ್ಥೆ ಮಾಡಿಕೊಳ್ಳಿ, ಆದೀತಲ್ಲ?'' ಎಂದರು. ಬೇರೆ ಮಾರ್ಗ ಏನಿದೆ? 'ಆಯಿತು' ಎಂದೆ. ಅಕ್ಕಪಕ್ಕದವರಿಂದ ಸಾಲ ಪಡೆದು ಹೆಚ್ಚಿನ ಖರ್ಚು ಬಂದರೆ ಎದುರಿಸಲು ಸಿದ್ಧತೆ ಮಾಡಿಕೊಂಡೆ.

ಹಾಸನದಲ್ಲಿ ನಮ್ಮ ಪಂಡಿತ ಡಾಕ್ಟರರ ಆಸ್ಪತ್ರೆಯಲ್ಲಿ ಎಲ್ಲ ಅನುಕೂಲಗಳೂ ಇವೆ. ರಕ್ತ ಪರೀಕ್ಷೆ ನಡೆದು ಟೈಫಾಯಿಡ್ ಅಂತ ತೀರ್ಮಾನವಾಯಿತು. ಆ ಕಾಲಕ್ಕೆ ಅದೊಂದು ಮಹಾದೊಡ್ಡ